# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಬಿಬಿಎಂಪಿ/ಆಯುಕ್ತರು/ಪಿಆರ್/7362/2019-20

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿ
ಬೆಂಗಳೂರು, ದಿನಾಂಕ : 18/01/2020

**ಸುತ್ತೋಲೆ**

**ವಿಷಯ :** "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ಅನುಮೋದನೆಗೊಂಡು ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆ ಅಡಿ ಮುಂದುವರೆಸದೇ ಇರುವ ಹಾಗೂ ಕೈಬಿಟ್ಟಿರುವ ಕಾಮಗಾರಿಗಳನ್ನು ಕೈಗೊಳ್ಳದಿರುವ ಬಗ್ಗೆ ಹಾಗೂ ಜಾಬ್‌ಸಂಖ್ಯೆಗಳನ್ನು ರದ್ದುಪಡಿಸುವ ಬಗ್ಗೆ.

**ಉಲ್ಲೇಖ :**
1. ನವ ಬೆಂಗಳೂರು ಯೋಜನೆ ಅನುಮೋದನೆಯ ಸರ್ಕಾರದ ಆದೇಶ ಸಂಖ್ಯೆ : ನಅಇ 375 ಎಂಎನ್‌ವೈ 2018 ಬೆಂಗಳೂರು ದಿನಾಂಕ 01/02/2019.
2. SC-SP/TSP ಕಾಮಗಾರಿಗಳ ಅನುಮೋದನೆಯ ಸರ್ಕಾರದ ಆದೇಶ ಸಂಖ್ಯೆ : ನಅಇ 648 ಎಂಎನ್‌ವೈ 2018, ದಿನಾಂಕ 31/05/2019.
3. ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ ಸರ್ಕಾರದ ಆದೇಶ ಸಂಖ್ಯೆ : ನಅಇ 375 ಎಂಎನ್‌ವೈ 2018, ಬೆಂಗಳೂರು ದಿನಾಂಕ 20/09/2019.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ದಿನಾಂಕ 01/02/2019ರ ಆದೇಶದಲ್ಲಿ "ಮುಖ್ಯಮಂತ್ರಿಗಳ ನವ ಬೆಗಳೂರು ಯೋಜನೆ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018-19ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಒಟ್ಟು ವಿವಿಧ 16 ಅನುಬಂಧಗಳಲ್ಲಿ ರೂ.8015.37 ಕೋಟಿಗಳ ಕ್ರಿಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತದೆ. ಸರ್ಕಾರದ ಆದೇಶದಂತೆ ನವ ಬೆಂಗಳೂರು ಯೋಜನೆ ಅಡಿ ವಿವಿಧ ಲೆಕ್ಕಶೀರ್ಷಿಕೆಗಳ ಅಡಿ ರೂ.837.49 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ 2018-19ನೇ ಸಾಲಿನಲ್ಲಿ ರೂ.8015.37 ಕೋಟಿಗಳ ನವ ಬೆಂಗಳೂರು ಯೋಜನೆ ಅಡಿ ಈಗಾಗಲೇ ಅನುಮೋದನೆ ಆಗಿರುವ ಕಾಮಗಾರಿಗಳಲ್ಲಿ ರೂ.573.58 ಕೋಟಿಗಳ ಕಾಮಗಾರಿ ಕೈಬಿಟ್ಟು ರೂ.573.58 ಕೋಟಿಗಳ SC-SP/TSP ಕ್ರಿಯಾ ಯೋಜನೆ ಕಾಮಗಾರಿಗಳಿಗೆ ಅನುಮೋದನೆ ನೀಡಿರುತ್ತದೆ. ರೂ.536.30 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.

ಮುಂದುವರೆದು, ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ ದಿನಾಂಕ 01/02/2019 ರಲ್ಲಿ ಅನುಮೋದಿಸಿದ್ದು, ನವ ಬೆಂಗಳೂರು ಯೋಜನೆಯನ್ನು ರದ್ದುಪಡಿಸಿ ಪರ್ಯಾಯವಾಗಿ "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆ ಅಡಿ ಅನುಬಂಧ-1 ರಿಂಧ 12 ರವರೆಗೆ ರೂ.8015.37 ಕೋಟಿಗಳ ಕ್ರಿಯಾ ಯೋಜನೆಗೆ SC-SP / TSP ಕಾಮಗಾರಿಗಳನ್ನು ಒಳಗೊಂಡ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತದೆ. ನವ ಬೆಂಗಳೂರು ಯೋಜನೆಯಲ್ಲಿನ ಕಾಮಗಾರಿಗಳು ನವ ನಗರೋತ್ಥಾನ ಯೋಜನೆ ಅಡಿ ಮುಂದುವರೆಸದೇ ಇರುವ ಕಾಮಗಾರಿ / ಜಾಬ್‌ಸಂಖ್ಯೆಗಳನ್ನು ರದ್ದುಪಡಿಸಿದೆ. ರದ್ದುಪಡಿಸಲಾದ ಜಾಬ್‌ಸಂಖ್ಯೆ / ಕಾಮಗಾರಿಗಳನ್ನು ಕೈಗೊಳ್ಳಬಾರದೆಂದು ಸೂಚಿಸಿದೆ.

ಆದಾಗ್ಯೂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ, ಅಧಿಕಾರಿ / ಸಿಬ್ಬಂದಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಅಗತ್ಯ ಕ್ರಮ ಜರುಗಿಸಲಾಗುವುದು. ಹಾಗೂ ನವ ಬೆಂಗಳೂರು ಯೋಜನೆ ಮತ್ತು SC-SP/TSP ಯೋಜನೆ ಅಡಿಯ ಕಾಮಗಾರಿಗಳು ನವ ನಗರೋತ್ಥಾನ ಯೋಜನೆ ಮಂದುವರೆದು ನವ ಬೆಂಗಳೂರು ಯೋಜನೆ ಅಡಿ ಜಾಬ್‌ಸಂಖ್ಯೆ ಪಡೆದು ಪುನಃ ನವ ನಗರೋತ್ಥಾನ ಯೋಜನೆ ಅಡಿ ಜಾಬ್‌ಸಂಖ್ಯೆ ಪಡೆದಿದ್ದಲ್ಲಿ, ನವ ಬೆಂಗಳೂರು ಯೋಜನೆ ಅಡಿ ಪಡೆದಿರುವ ಜಾಬ್‌ಸಂಖ್ಯೆಗಳನ್ನು ರದ್ದುಪಡಿಸಲು ಮುಖ್ಯ ಆರ್ಥಿಕ ಅಧಿಕಾರಿಗಳ ಕಛೇರಿಗೆ ದೃಢೀಕರಣದೊಂದಿಗೆ ಹಿಂದಿರುಗಿಸಲು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

......2/-

Scanned by CamScanner

ರವರಿಗೆ,
ಮುಖ್ಯ ಅಭಿಯಂತರರು
ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಬೊಮ್ಮನಹಳ್ಳಿ/
ಯಲಹಂಕ/ರಾಜಾರಜೇಶ್ವರಿನಗರ/ದಾಸರಹಳ್ಳಿ/ಯೋಜನೆ/ರಸ್ತೆ ಮೂಲಭೂತ ಸೌಕರ್ಯ
ಪಾಲಿಕೆಯ ಎಲ್ಲಾ ಕಾರ್ಯಪಾಲಕ ಅಭಿಯಂತರರು
ಕಾರ್ಯಪಾಲಕ ಅಭಿಯಂತರರು (ಯೋಜನೆ)/ರಸ್ತೆ ಮೂಲಭೂತ ಸೌಕರ್ಯ/ಟಿ.ಇ.ಸಿ
ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಬೊಮ್ಮನಹಳ್ಳಿ/
ಯಲಹಂಕ/ರಾಜರಾಜೇಶ್ವರಿನಗರ/ದಾಸರಹಳ್ಳಿ/
ತೋಟಗಾರಿಕೆ ಅಧೀಕ್ಷಕರು
ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಬೊಮ್ಮನಹಳ್ಳಿ/
ಯಲಹಂಕ/ರಾಜಾರಜೇಶ್ವರಿನಗರ/ದಾಸರಹಳ್ಳಿ/
ಮುಖ್ಯ ಅಭಿಯಂತರರು/ಕೆರೆಗಳು/ಉಪ ನಿಯಂತ್ರಕರು (ಹಣಕಾಸು)/
ಅರಣ್ಯಾಧಿಕಾರಿಗಳು/ಎಲ್ಲಾ ವಲಯ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಉಪ ನಿರ್ದೇಶಕರು (ತೋಟಗಾರಿಕೆ)

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ/ಹಣಕಾಸು/ಆಡಳಿತ/ಆಸ್ತಿಗಳು/ಕಂದಾಯ/ಕಲ್ಯಾಣ/ಮಾರುಕಟ್ಟೆ) ರವರ ಕಳುಹಿಸಿದೆ.
4. ಪಾಲಿಕೆಯ ಎಲ್ಲಾ ವಲಯ ಆಯುಕ್ತರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ಕಳುಹಿಸಿಕೊಡಲು ಕಳುಹಿಸಿದೆ.
6. ಪ್ರಧಾನ ಅಭಿಯಂತರರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಎಲ್ಲಾ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
8. ಮುಖ್ಯ ಆರ್ಥಿಕ ಅಧಿಕಾರಿಗಳ ಮುಂದಿನ ಕ್ರಮಕ್ಕಾಗಿ.
9. ಮುಖ್ಯ ಲೆಕ್ಕಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಮಾಹಿತಿ ತಂತ್ರಜ್ಞಾನ ಸಲಹೆಗಾರರ ಮಾಹಿತಿ ಹಾಗೂ ಪಾಲಿಕೆಯ ಅಂತರ್ಜಾಲದಲ್ಲಿ ಕಳುಹಿಸಿದೆ.
11. ಕಛೇರಿ ಪ್ರತಿ.

Scanned by CamScanner